# <u>*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು*</u>

**ಎಸ್.ಸಿ. 45/2021**

| | | | |
|---|---|---|---|
| **ಸಾಕ್ಷಿದಾರರ ಹೆಸರು** | **:** ಶ್ರೀ ಮಹದೇವು | | <u>*ಪ್ರಮಾಣ ಮಾಡಿಸಿದ ದಿನಾಂಕಃ*</u> |
| **ತಂದೆ/ಗಂಡನ ಹೆಸರು** | **:** ಶ್ರೀ ಶಂಭುಲಿಂಗಪ್ಪ | | **24.11.2023** |
| **ವಯಸ್ಸು** | **:** **55 ವರ್ಷ** | | |
| **ವೃತ್ತಿ** | **:** ವ್ಯವಸಾಯ | **ಪ್ರಾ.ಸಾ.** | **: 14** |
| **ವಾಸಸ್ಥಳ** | **:** ಭುಗತಗಳ್ಳಿ | **ಚಾ.ಸಾ.** | **: 22** |

<u>**ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದಃ**</u>

. ಈ ಪ್ರಕರಣದ *1* ನೇ ಆರೋಪಿತ ನಾಗೇಶ ನನ್ನ ಮಗನಿರುತ್ತಾನೆ. ನಾನು ಭುಗತಹಳ್ಳಿಯಲ್ಲಿ ವಾಸವಿದ್ದೇನೆ ನನಗೆ ಇಬ್ಬರು ಮಕ್ಕಳಿದ್ದು ನಾಗೇಶ ಮೊದಲನೇ ಮಗನಿರುತ್ತಾನೆ. ನಾಗೇಶನು ಯಾವುದೋ ಬ್ಯಾಂಕ್ ನಲ್ಲಿ ರಿಕವರಿ ಏಜೆಂಟ್ ಕೆಲಸ ಮಾಡಿಕೊಂಡಿದ್ದ ಅದರ ಜೊತೆಗೆ ನಮ್ಮ ಮನೆಯ ವ್ಯವಸಾಯ ಮತ್ತು ದನಗಳನ್ನು ನೋಡಿಕೊಳ್ಳುತ್ತಿದ್ದ. ನನ್ನ ಬಳಿ ಹಿರೋ ಹೊಂಡಾ ಪ್ಯಾಷನ್ ಮೋಟಾರ್ ಸೈಕಲ್ ಇದೆ. ಈಗ ನಾನು ನೋಡುತ್ತಿರುವ ಪೊಟೋಗಳು ನನ್ನ ಮೋಟಾರ್ ಸೈಕಲ್ ನ ಪೊಟೋಗಳು ಇದ್ದು ಅವುಗಳನ್ನು ನಾನು ಮೋಟಾರ್ ಸೈಕಲ್ ಅನ್ನು ಪೋ.ಠಾಣೆಯಿಂದ ಬಿಡಿಸಿಕೊಳ್ಳುವಾಗ ತೆಗೆದಿದ್ದಾರೆ. ಸದರಿ ಪೊಟೋಗಳನ್ನು ನಿ.ಪಿ-*62* ರಿಂದ *67* ಎಂದು ಗುರುತಿಸಿದೆ. ನನ್ನ ಮಗ ಯಾವುದೋ ಕೊಲೆ ಕೇಸ್ ನಲ್ಲಿ ಸಿಕ್ಕಿಹಾಕಿಕೊಂಡಿದ್ದಾನೆ ಎಂದು ನನ್ನ ಮೋಟಾರ್ ಸೈಕಲ್ ಅನ್ನು ಸೀಜ್ ಮಾಡಿದ್ದರು. ಆ ಕಾಲಕ್ಕೆ ನಾನು ನನ್ನ ವಾಹನವನ್ನು ಬಿಡಿಸಿಕೊಂಡಿದ್ದೆ. ಆ ಮೋಟಾರ್ ಸೈಕಲ್ ಅನ್ನು ನನ್ನ ಮನೆಯಲ್ಲಿ ಎಲ್ಲರೂ ಓಡಿಸುತ್ತಿದ್ದರು. ನಾಗೇಶ ಜಮೀನು

ಗುತ್ತಿಗೆ ತೆಗೆದುಕೊಂಡು ವ್ಯವಸಾಯ ಮಾಡುತ್ತಿದ್ದ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ಮೋಟಾರ್ ಸೈಕಲ್ ಅನ್ನು ಹೆಚ್ಚಿಗೆ ನಾನೇ ಬಳಸುತ್ತಿದ್ದೆ. ಜಮೀನು ಹತ್ತಿರ ಇರುವ ಕಾರಣ ಜಮೀನಿಗೆ ಹೋಗಲು ನಾವು ಮೋಟಾರ್ ಸೈಕಲ್ ಅನ್ನು ಬಳಸುವುದಿಲ್ಲ. ನನ್ನ ಮಗ ನಾಗೇಶ ಯಾರೊಂದಿಗೆ ಸೇರಿಕೊಂಡು ಕೊಲೆ ಮಾಡಿದ್ದ ಮತ್ತು ಯಾರನ್ನು ಕೊಲೆ ಮಾಡಿದ್ದು ಎಂದು ನನಗೆ ಗೊತ್ತಿಲ್ಲ. ವಾಹನ ಬಿಡಿಸಿಕೊಳ್ಳುವಾಗ ನಾನು ಆ ವಾಹನಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಪೋ.ಠಾಣೆಯಲ್ಲಿ ಹಾಜರುಪಡಿಸಿದ್ದೆ. ಪೋಲೀಸರ ಮುಂದೆ ನನ್ನ ಮಗ ನಾಗೇಶ ದೇವಲಾಪುರ ಮಹದೇವಸ್ವಾಮಿಯ ಜಮೀನನ್ನು ಗುತ್ತಿಗೆ ಪಡೆದ ಬಗ್ಗೆ ಮತ್ತು ನಿರಂಜನ, ದೇವಲಾಪುರ ಜಮೀನಿನ ಪಕ್ಕದಲ್ಲಿರುವ ಶಾಲೆಯ ಮೇಷ್ಟ್ರು ಮತ್ತು ಅವರ ಸ್ನೇಹಿತರು ಸೇರಿ ಪರಶಿವಮೂರ್ತಿಯವರನ್ನು ಕೊಲೆ ಮಾಡಿದ್ದಾರೆ ಎಂದು ಗೊತ್ತಾಗಿದೆ ಎಂದು ನಾನು ಹೇಳಿಕೆ ಕೊಟ್ಟಿಲ್ಲ.

***ಈ ಹಂತದಲ್ಲಿ, ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.***

***ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-***

*2.* ಪೋಲೀಸರ ಮುಂದೆ ನನ್ನ ಮಗ ನಾಗೇಶ ದೇವಲಾಪುರ ಮಹದೇವಸ್ವಾಮಿಯ ಜಮೀನನ್ನು ಗುತ್ತಿಗೆ ಪಡೆದ ಬಗ್ಗೆ ಮತ್ತು ನಿರಂಜನ, ದೇವಲಾಪುರ ಜಮೀನಿನ ಪಕ್ಕದಲ್ಲಿರುವ ಶಾಲೆಯ ಮೇಷ್ಟ್ರು ಮತ್ತು ಅವರ ಸ್ನೇಹಿತರು ಸೇರಿ ಪರಶಿವಮೂರ್ತಿಯವರನ್ನು ಕೊಲೆ ಮಾಡಿದ್ದಾರೆ ಎಂದು ಗೊತ್ತಾಗಿದೆ ಎಂದು ನಾನು ಹೇಳಿಕೆ

ಕೊಟ್ಟಿದ್ದೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿ.ಪಿ-68 ಎಂದು ಗುರುತಿಸಿದೆ. 1 ನೇ ಆರೋಪಿತ ನನ್ನ ಮಗನಿರುವ ಕಾರಣ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು ಃ 1 ಮತ್ತು 2 ನೇ ಆರೋಪಿ ಪರ ವಕೀಲರಾದ ಶ್ರೀ ಸಿ.ಎಂ.ಜೆ ರವರಿಂದಃ-</u>

3. ನಾನು ಸರಸ್ವತಿಪುರಂ ಪೋ.ಠಾಣೆಗೆ ಹೋದಾಗ ನಿನ್ನ ಮಗನನ್ನು ಬಿಟ್ಟು ಬಿಡುತ್ತೇವೆ 30,000/- ರೂಪಾಯಿ ಕೊಡಿ ಎಂದು ಹೇಳಿದ್ದರು ಮತ್ತು ನಾನು ಆ ಹಣವನ್ನು ಕೊಟ್ಟಿದ್ದೆ ಎಂದರೆ ನಿಜ. ಟಾಟಾ ಏಸ್ ವಾಹನ ನನ್ನ ಹೆಸರಿನಲ್ಲಿ ನಮೂನೆಯಾಗಿಲ್ಲ ಎಂದರೆ ನಿಜ. ಹಿರೋ ಹೋಂಡಾ ಮೊಟಾರ್ ಸೈಕಲ್ ನನ್ನ ಹೆಸರಿನಲ್ಲಿದ್ದ ಕಾರಣ ನಾನು ಒಬ್ಬನೇ ಅದನ್ನು ಹೆಚ್ಚಾಗಿ ಬಳಸುತ್ತಿದ್ದೆ ಎಂದರೆ ನಿಜ. ಆ ವಾಹನವನ್ನು ನನ್ನ ಮಕ್ಕಳಿಗೆ ಕೊಡುತ್ತಿರಲಿಲ್ಲ ಎಂದರೆ ನಿಜ.

**3 ರಿಂದ 5 ನೇ ಆರೋಪಿತರ ವಕೀಲರು ಈ ಮೇಲಿನಂತೆ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲು ಹೇಳುತ್ತಾರೆ.**

ಮರು ವಿಚಾರಣೆಃ- ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸ ಇ ಎ ಒ.,

4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು